

بِسْمِ اللَّهِ الرَّحْمَنِ الرَّحِيم

# ಸದ್ಗುಣಗಳ ಕುರಿತು

# ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ಉಪದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **18–08–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಗ್ರಂಥವಾದ ಕಿಶ್ತಿನೂಹ್‌ನಲ್ಲಿ ಹೇಳುತ್ತಾರೆ: "ನಿಮ್ಮ ಅಸ್ತಿತ್ವದಲ್ಲಿ ಸಂಪೂರ್ಣವಾದೊಂದು ಬದಲಾವಣೆ (ಕ್ರಾಂತಿ) ಆಗಬೇಕೆಂದು ಅಲ್ಲಾಹನು ಬಯಸುತ್ತಾನೆ. ಅವನು ನಿಮ್ಮಿಂದ ಒಂದು ಮರಣವನ್ನು ಆವಶ್ಯಪಡುತ್ತಾನೆ. ಅನಂತರ ಅವನು ನಿಮ್ಮನ್ನು ಜೀವಂತಗೊಳಿಸುವನು. ನೀವು ಪರಸ್ಪರ ಬೇಗನೆ ರಾಜಿಮಾಡಿಕೊಳ್ಳಿರಿ. ನಿಮ್ಮ ಸಹೋದರರ ಪಾಪಗಳನ್ನು ಕ್ಷಮಿಸಿರಿ. ತನ್ನ ಸಹೋದರರ ಜೊತೆಗೆ ರಾಜಿ ಮಾಡಿಕೊಳ್ಳಲು ಆಶಿಸದವನು ಉದ್ಧಟನಾಗಿದ್ದಾನೆ. ಅವನು ಸಮುದಾಯದಿಂದ ತುಂಡರಿಸಲ್ಪಟ್ಟು ದೂರೀಕರಿಸಲ್ಪಡುವನು. ಏಕೆಂದರೆ ಅವನು ಸಮುದಾಯದಲ್ಲಿ ಒಡಕನ್ನುಂಟು ಮಾಡುತ್ತಾನೆ. ನೀವು ನಿಮ್ಮ ಸ್ವಾರ್ಥ ಅಭಿಲಾಷೆಗಳನ್ನು ಎಲ್ಲ ನಿಟ್ಟಿನಿಂದಲೂ ಬಿಟ್ಟುಬಿಡಿರಿ. ನೀವು ಪರಸ್ಪರ ಸಿಟ್ಟನ್ನು ಬಿಟ್ಟುಬಿಡಿರಿ. ನೀವು ಸತ್ಯವಂತರಾಗಿದ್ದರೂ ಸುಳ್ಳುಗಾರರ ಹಾಗೆ ವಿನಯದಿಂದ ವರ್ತಿಸಿರಿ. ಹೀಗೆ ಮಾಡಿದರೆ ನೀವು ಕ್ಷಮಿಸಲ್ಪಡುವಿರಿ. ನೀವು ಸ್ವಾರ್ಥಭಿಲಾಷೆಗಳೆಂಬ ಬೊಜ್ಜನ್ನು ಬೆಳೆಸಬೇಡಿರಿ. ನೀವು ಯಾವ ಬಾಗಿಲಲ್ಲಿ ಪ್ರವೇಶಿಸಬೇಕೆಂದು ಕರೆಯಲ್ಪಟ್ಟಿರುವಿರೋ ಆ ಬಾಗಿಲಿನೊಳಗೆ ಬೊಜ್ಜನ್ನು ಹೊಂದಿದವರು ಪ್ರವೇಶಿಸಲು ಸಾಧ್ಯವಾಗದು. ತನ್ನ ಸಹೋದರನ ತಪ್ಪುಗಳನ್ನು ಹೆಚ್ಚು ಹೆಚ್ಚಾಗಿ ಕ್ಷಮಿಸುವವನೇ ನಿಮ್ಮ ಪೈಕಿ ಹೆಚ್ಚು ಗೌರವಾರ್ಹನಾಗಿದ್ದಾನೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಉಲ್ಲೇಖವನ್ನು ವಿವಿಧ ಭಾಷಣಗಳಲ್ಲಿ, ದರ್ಸ್‌ಗಳಲ್ಲಿ ಅಹ್ಮದಿಯರ ಮುಂದೆ ಅನೇಕ ಬಾರಿ ಪ್ರಸ್ತಾಪಿಸಲಾಗುತ್ತದೆ. ನೀವು ಸತ್ಯವಂತರಾಗಿದ್ದರೂ ಸುಳ್ಳು ಹೇಳುವವರ ಹಾಗೆ ವಿನಯದಿಂದ ವರ್ತಿಸಿರಿ ಎಂಬ ವಾಕ್ಯವನ್ನು ಬಹತೇಕ ಅಹ್ಮದಿಯರು ಹೆಚ್ಚಾಗಿ ಬಳಸುತ್ತಾ ಇರುತ್ತಾರೆ. ನಾನು ಕಳೆದ ವಾರದ ಖುತ್‌ಬದಲ್ಲಿ ಜಗಳಗಳ ಬಗ್ಗೆ, ಮೊಕದ್ದಮೆಗಳ ಬಗ್ಗೆ ಮತ್ತು ಖುಝಾ ಬಗ್ಗೆ ಪ್ರಸ್ತಾಪಿಸಿದ್ದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ಮೇಲೆ ಉಲ್ಲೇಖಿಸಿದ ಉಪದೇಶಗಳು ಅವರು ತನ್ನನ್ನು ನಂಬುವವರಿಂದ ಪ್ರತೀಕ್ಷಿಸುತ್ತಾ ಇರುವವುಗಳು ಮತ್ತು ತನ್ನನ್ನು ನಂಬುವರಿಗೋಸ್ಕರ ಅವರಿಗಿದ್ದ ಹೃತ್ಪೂರ್ವಕ ನೋವನ್ನು ಪ್ರಕಟಿಸುವವುಗಳಾಗಿವೆ. ಕಿಶ್ತಿನೂಹ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆದ ಉಪದೇಶಗಳನ್ನು ಸಂಪೂರ್ಣವಾಗಿ ಓದುವಾಗ ಮನುಷ್ಯನು ನಡುಕವನ್ನು ಅನುಭವಿಸುತ್ತಾನೆ. ಹೀಗಿದ್ದರೂ ನಮ್ಮವರಲ್ಲಿ ಕೆಲವರು ಹೇಗಿದ್ದಾರೆಂದರೆ ಅವರು ಕ್ಷಮಿಸಲು, ಮತ್ತು ರಾಜಿಯಾಗಲು ಚಾಚಿದ ಕೈಯನ್ನು ಅಂಗೀಕರಿಸಲು ಸಿದ್ಧರಾಗಿರುವುದಿಲ್ಲ. ಅಂತಹ ಜನರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 'ಅವನು ಸಮುದಾಯದಿಂದ ತುಂಡರಿಸಲ್ಪಡುವನು' ಎಂದು ಹೇಳಿದ್ದಾರೆ. ಹಟದಿಂದ ವರ್ತಿಸಿ ತಪ್ಪುಗಳನ್ನು ಕ್ಷಮಿಸದವನು ಭಾಗ್ಯ ಹೀನನಾಗಿದ್ದಾನೆ ಎಂದೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ.

ಆದುದರಿಂದ ಹಟದಿಂದ ವರ್ತಿಸುವವರಿಗೆ ಬಹಳ ದೊಡ್ಡ ಮುನ್ನೆಚ್ಚರಿಕೆ ನೀಡಲಾಗಿದೆ. ಅಂತಹ ಜನರು ಪ್ರಜ್ಞಾಪೂರ್ವಕವಾಗಿ ಚಿಂತಿಸಬೇಕು. ಅವರು ಒಂದು ಕಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್‌ಮಾಡಿ 'ನಾವು ಗಲಬೆಗೊಂದಲಗಳನ್ನು ಮಾಡಲಾರೆವು, ಭಾವೋದ್ವೇಗಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವೆವು' ಎಂದು ಪ್ರತಿಜ್ಞೆ ಮಾಡುತ್ತಾರೆ. ಆದರೆ ಇನ್ನೊಂದು ಕಡೆ ಅವರು ರಾಜಿಯಾಗಲು ನಿರಾಕರಿಸುತ್ತಾರೆ. ಹೀಗೆ ಮಾಡುವುದು ಅವರು ಬೈಅತ್ ಪ್ರತಿಜ್ಞೆಯಿಂದ ದೂರ ಸರಿದಿರುವುದನ್ನು ಸೂಚಿಸುತ್ತದೆ. ಅವರು ಬೈಅತ್ ಪ್ರತಿಜ್ಞೆ ಪಾಲಿಸುವವರಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದರು: ನಮ್ಮ ಜಮಾಅತ್ ಹೇಗಿರಬೇಕೆಂದರೆ ಕೇವಲ ವಾಚಾಳಿತನದ ಪ್ರದರ್ಶನ ಮಾತ್ರ ಮಾಡುವವರಾಗಬಾರದು.

ಬೈಅತ್ ಮಾಡುವುದರ ಉದ್ದೇಶಲಕ್ಷ್ಯಗಳನ್ನು ಈಡೇರಿಸದೆ ಇದ್ದರೆ ಅಲ್ಲಾಹನು ಸಂಪ್ರೀತನಾಗಲಾರನು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಾಹನ ಸಂಪ್ರೀತಿ ಗಳಿಸಲು ಜನರ ಹಕ್ಕುಗಳನ್ನು ಈಡೇರಿಸಿಕೊಡುವುದು, ರಾಜಿಮಾಡಿಕೊಂಡು ಸೌಹಾರ್ದದಿಂದಿರುವುದು ಸಹ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಸ್ವಂತ ಸ್ಥಿತಿಯನ್ನು ವಿವರಿಸುತ್ತಾ ಮತ್ತು ಕ್ಷಮಿಸುವ ಎಂತಹ ವಿಶಾಲ ಶಕ್ತಿ ತನಗಿದೆ ಎಂದು ವಿವರಿಸುತ್ತಾ ಹೇಳಿದರು: ನಾನು ಅಲ್ಲಾಹನ ಆಣೆಹಾಕಿ ಹೇಳುತ್ತೇನೆ: ಒಬ್ಬನು ನನ್ನನ್ನು ಸಾವಿರಾರು ಸಲ ದಜ್ಜಾಲ್, ಕಝ್ಝಾಬ್ ಎಂದು ಕರೆದರೂ ನನ್ನನ್ನು ವಿರೋಧಿಸಲು ಪ್ರತಿಯೊಂದು ರೀತಿಯಲ್ಲಿ ಪ್ರಯತ್ನ ಮಾಡಿದ್ದರೂ ಅವನು ಅನಂತರ ರಾಜಿಯಾಗಲು ಅಪೇಕ್ಷೆ ಪ್ರಕಟಿಸಿದರೆ ಅವನು ನನ್ನ ವಿರುದ್ಧ ಏನೆಲ್ಲ ಮಾಡಿರುವನು, ಅವನು ನನ್ನೊಂದಿಗೆ ಹೇಗೆಲ್ಲಾ ವರ್ತಿಸಿದನು ಎಂಬ ಯೋಚನೆ ನನ್ನ ಹೃದಯದಲ್ಲಿ ಉಂಟಾಗಲಾರದು. ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮ್ ನಮಗೆ ಉಪದೇಶಿಸುತ್ತಾ ಹೇಳಿದರು: ನೀವು ಎರಡು ವಿಷಯಗಳನ್ನು ನೆನಪಿನಲ್ಲಿಡಬೇಕೆಂದು ನಾನು ಉಪದೇಶಿಸುತ್ತೇನೆ. ಮೊದಲನೆಯ ಉಪದೇಶ, ನೀವು ಅಲ್ಲಾಹನಿಗೆ ಭಯಪಡಿರಿ ಎಂಬುದಾಗಿದೆ. ಎರಡನೆಯ ಉಪದೇಶ, ನೀವು ನಿಮ್ಮ ಸ್ವಂತದ ಬಗ್ಗೆ ಹೇಗೆ ಸಹಾನುಭೂತಿ ಹೊಂದಿರುವಿರೋ ಅಂತಹ ಸಹಾನುಭೂತಿ ನಿಮ್ಮ ಸಹೋದರರ ಬಗ್ಗೆಯೂ ಹೊಂದಿರಿ. ಯಾರಿಂದಾದರೂ ಯಾವುದಾದರೂ ತಪ್ಪು ಆಗಿದ್ದರೆ ಅದನ್ನು ಕ್ಷಮಿಸಬೇಕು. ಅದರ ಬಗ್ಗೆ ದ್ವೇಷಭಾವನೆ ಹೊಂದಬಾರದು.

ನಾವು ಯಾವಾಗಲೂ ಈ ವಿಷಯಗಳನ್ನು ನಮ್ಮ ಮುಂದೆ ಇರಿಸಿಕೊಳ್ಳಬೇಕು. ಈಗ ಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಪ್ರತಿಯೊಂದು ಸಮಯದಲ್ಲಿ ಗಲಬೆಗೊಂದಲ ಅಶಾಂತಿಯ ಪರಿಸ್ಥಿತಿ ಇದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ಒಂದು ಭದ್ರಕೋಟೆಯೊಳಗಿರುವುದಾಗಿ ಭಾವಿಸುತ್ತೇವೆ. ಲೋಕದ ಸಾಮಾನ್ಯ ಗಲಬೆಗೊಂದಲಗಳಿಂದ ಅಲ್ಲಾಹನು ನಮ್ಮನ್ನು ಸಂರಕ್ಷಿಸಿದ ಬಗ್ಗೆ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಆದುದರಿಂದ ನಾವು ಅನ್ಯರೊಂದಿಗೆ ವ್ಯವಹಾರ ಮಾಡುವಾಗ ಮೃದುವಾಗಿ ವರ್ತಿಸಿ ಶಾಂತಿ ಸ್ಥಾಪನೆಯ ಅಸ್ತಿಭಾರ ಹಾಕಬೇಕಾದುದು ಆವಶ್ಯಕವಾಗಿದೆ. ಹಾಗೆ ಮಾಡದಿದ್ದರೆ ನಮ್ಮ ಹೇಳಿಕೆಗಳು ಬರೇ ಬಾಯಿಮಾತುಗಳು ಮಾತ್ರವಾಗುವುವು.

ಸೃಷ್ಟಿಗಳ ಬಗ್ಗೆ ಅನುಕಂಪ ಮತ್ತು ಸೌಹಾರ್ದ ಸ್ಥಾಪನೆ ಎಂತಹ ಸದ್ಗುಣಗಳೆಂದರೆ ಅವುಗಳನ್ನು ಹೊಂದಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಪದೇ ಪದೇ ಉಪದೇಶ ನೀಡಿದ್ದಾರೆ. ಪ್ರತಿಯೊಬ್ಬ ಅಹ್ಮದಿ ಈ ಉಪದೇಶದ ಬಗ್ಗೆ ಬಹಳ ಲಕ್ಷ್ಯ ನೀಡಬೇಕು. ಒಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ತನ್ನ ಎದುರಾಳಿಯನ್ನು ಸೋಲಿಸಿ ಕೆಡವಿ ಹಾಕುವವನು ಶೂರ ಪಹಿಲ್ವಾನನಲ್ಲ, ತನಗೆ ಕೋಪ ಬಂದಾಗ ತನ್ನನ್ನು ನಿಯಂತ್ರಿಸುವವನೇ ನಿಜವಾದ ಪಹಿಲ್ವಾನನಾಗಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಬಲಿಷ್ಠ ದೇಹ ಹೊಂದಿದವರ ಮತ್ತು ಪಹಿಲ್ವಾನರ ಆವಶ್ಯಕತೆ ನಮ್ಮ ಜಮಾಅತ್‌ಗೆ ಇಲ್ಲ. ತಮ್ಮ ಸ್ವಭಾವಗುಣಗಳನ್ನು ಬದಲಾಯಿಸಲು ಪ್ರಯತ್ನಿಸುವ ಶಕ್ತಿ ಹೊಂದಿರುವವರ ಆವಶ್ಯಕತೆ ಇದೆ. ನೀವು ನೆನಪಿಡಿರಿ, ನೀವು ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ನಿಮ್ಮ ಸ್ವಭಾವಗುಣಗಳನ್ನು ಬದಲಾಯಿಸಲು ಬಳಸಿರಿ. ಏಕೆಂದರೆ ವಾಸ್ತವಿಕ ಶಕ್ತಿ ಮತ್ತು ಧೈರ್ಯ ಅದರಲ್ಲೇ ಇದೆ. ನಮ್ಮ ಉದ್ದೇಶ ಇದೇ ಆಗಿರಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಹೀಗೆ ಹೇಳಿದರು: ತನ್ನ ದುರ್ಗುಣಗಳನ್ನು ತ್ಯಜಿಸುವವನು ತನ್ನ ನಿಂದಾರ್ಹವಾದ ಸ್ವಭಾವಗುಣಗಳನ್ನು ಬಿಟ್ಟು ಸದ್ಗುಣಗಳನ್ನು ಹೊಂದುವವನು ಒಂದು ಪವಾಡವನ್ನು (ಕರಾಮತನ್ನು) ಪ್ರಕಟಿಸುತ್ತಾನೆ. ಉನ್ನತ ಸ್ವಭಾವ ಗುಣಗಳನ್ನು ಹೊಂದುವುದು ಪ್ರತಿಯೊಬ್ಬನು ಪ್ರಕಟಿಸುವ ಒಂದು ಪವಾಡವಾಗಿದೆ. ಕೆಲವು ಜನರು ಹೇಳುತ್ತಾರೆ, ಬೈಅತ್ ಮಾಡಿದುದರಿಂದ ಏನು ಕರಾಮತ್ ಸಂಭವಿಸಿತೆಂದು. ಉನ್ನತ ಸ್ವಭಾವಗುಣಗಳನ್ನು ಹೊಂದುವುದೇ ಒಂದು ದೊಡ್ಡ ಕರಾಮತ್ ಆಗಿದೆ. ಬೈಅತ್ ಮಾಡಿದವರು ಕೆಟ್ಟ ಸ್ವಭಾವಗಳನ್ನು ತ್ಯಜಿಸಿದರು, ಸ್ವಂತ ಇಷ್ಟಪ್ರಕಾರ ವರ್ತಿಸುವುದನ್ನು ಬಿಟ್ಟು, ವಿನಯವನ್ನು ಅವಲಂಬಿಸಿರುವುದು ಸಹ ಒಂದು ಪವಾಡವಾಗಿದೆ. ಆದುದರಿಂದ ನಿಮ್ಮ ಪೈಕಿ ಯಾರು ಕರಾಮತ್ ಪ್ರದರ್ಶಿಸುವವನಾಗಲು ಬಯಸುವುದಿಲ್ಲ? ಯಾವಾಗಲೂ ನೆಲೆ ನಿಲ್ಲುವ ಕರಾಮತ್ ಇದೇ ಆಗಿದೆ. ಇದೇ ಅದ್ಭುತ ಕೃತ್ಯವನ್ನು, ಈ ಕ್ರಾಂತಿಯನ್ನು ನೀವು ನಿಮ್ಮೊಳಗೆ ಸೃಷ್ಟಿಸಬೇಕು. ಕೆಟ್ಟಗುಣಗಳನ್ನು ಬಿಟ್ಟು ಉನ್ನತ ಸ್ವಭಾವಗುಣಗಳನ್ನು ಹೊಂದಿದವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯರು ತಮ್ಮ ಸ್ವಭಾವ ಗುಣಗಳನ್ನು ದುರಸ್ತಿ ಮಾಡಬೇಕು. ಇದು ಎಂತಹ ಕರಾಮತ್ ಆಗಿದೆ ಎಂದರೆ ಅದರ ಪ್ರಭಾವ ಎಂದೂ ನಾಶವಾಗುವುದಿಲ್ಲ. ಅದರ ಲಾಭ ದೂರದ ತನಕ ತಲಪುತ್ತವೆ. ಸತ್ಯವಿಶ್ವಾಸಿ ಸೃಷ್ಟಿಗಳ ಮತ್ತು ಸೃಷ್ಟಿಕರ್ತನ ದೃಷ್ಟಿಯಲ್ಲಿ ಕರಾಮತ್ ಪ್ರದರ್ಶಿಸುವವನಾಗಬೇಕು. ಅನೇಕ ದುರ್ಜನರು ಮತ್ತು ಭೋಗಲಾಲಸಿಗಳು ಅಸಾಧಾರಣ ದೃಷ್ಟಾಂತಗಳಿಂದ ಪ್ರಭಾವಿತರಾಗಲಿಲ್ಲವಾದರೂ ಅವರು ಸದ್ಗುಣಗಳನ್ನು ನೋಡಿ ತಲೆಬಾಗಿದರು.

ಮನುಷ್ಯನೊಳಗಿಂದ ಸ್ವಾರ್ಥ ಹಿತಾಸಕ್ತಿಯ ಕ್ರಿಮಿ ಹೊರಗೆ ಸರಿದು ಹೋಗದಿದ್ದರೆ ಅವರು ಏಕ ದೇವ ವಿಶ್ವಾಸಿ ಸಹ ಆಗಿರುವುದಿಲ್ಲ ಎಂದು ಸೂಚಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಅನುಗ್ರಹದೊರಕದಿದ್ದರೆ ಸ್ವಾರ್ಥ ಹಿತಾಸಕ್ತಿಯ ಕ್ರಿಮಿ ಒಳಗಿನಿಂದ ಹೊರಗೆ ಬರಲಾರದು. ಆದುದರಿಂದ ಅಲ್ಲಾಹನ ಅನುಗ್ರಹ ಗಳಿಸಲು ಪ್ರಯತ್ನ ಮಾಡಬೇಕು. ಸ್ವಾರ್ಥ ಹಿತಾಸಕ್ತಿಯೆಂಬುದು ಬಹಳ ಸೂಕ್ಷ್ಮ ಕ್ರಿಮಿಗಳಾಗಿವೆ. ಅತ್ಯಧಿಕ ಹೆಚ್ಚು ಹಾನಿ ಮತ್ತು ನಷ್ಟ ಅವುಗಳಿಂದಲೇ ಸಂಭವಿಸುತ್ತದೆ. ಜನರು ಭಾವೋದ್ವೇಗಗಳಿಂದ ಪ್ರಭಾವಿತರಾಗಿ ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದರಿಂದ ಮತ್ತು ಅವನ ಹದ್ದುಬಸ್ತುಗಳಿಂದ ಹೊರಗೆ ಹೋಗುತ್ತಾರೆ. ಅದೇ ರೀತಿ ಜನರ ಹಕ್ಕುಗಳನ್ನು ನಾಶ ಮಾಡುತ್ತಾರೆ. ಅಂತಹ ಜನರು ಅವಿದ್ಯಾವಂತರೇನೂ ಅಲ್ಲ. ಅನೇಕ ಮೌಲವಿಗಳು, ಕರ್ಮಶಾಸ್ತ್ರ ಪಂಡಿತರು ಮತ್ತು ಸೂಫಿಗಳೆಂದು ಕರೆಯಲ್ಪಡುವವರು ಸಹ ಇಂತಹ ರೋಗಗಳಿಂದ ಪೀಡಿತರಾಗಿದ್ದಾರೆ. ಇಂತಹ ವಿಗ್ರಹಗಳಿಂದ ರಕ್ಷಣೆ ಪಡೆಯುವುದು ಶೂರತನವಾಗಿದೆ. ಅವುಗಳನ್ನು ಗುರುತಿಸುವುದೇ ಬುದ್ಧಿಶಾಲಿತ್ವವಾಗಿದೆ. ಈ ವಿಗ್ರಹಗಳ ಕಾರಣದಿಂದ ಪರಸ್ಪರ ಅವಿಶ್ವಾಸ ತಲೆಯೆತ್ತುತ್ತದೆ. ಅನೇಕ ಹತ್ಯೆಗಳಾಗುತ್ತವೆ. ಸಹೋದರ ತನ್ನ ಸಹೋದರನ ಹಕ್ಕನ್ನು ಕಿತ್ತುಕೊಳ್ಳುತ್ತಾನೆ. ಈ ರೀತಿಯಾಗಿ ಅನೇಕ ಕೆಡುಕುಗಳು ಅವುಗಳ ಕಾರಣದಿಂದ ಸಂಭವಿಸುತ್ತವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಸಾಧನ ಸಾಮಗ್ರಿಗಳ ಮೇಲೆ ಎಷ್ಟು

ಭರವಸೆ ಇಡಲಾಗುತ್ತಿದೆ ಎಂದರೆ ಅಲ್ಲಾಹನನ್ನು ಒಂದು ನಿಷ್ಕ್ರಿಯ ಅಂಗವೆಂಬಂತೆ ಗಣಿಸಲಾಗುತ್ತದೆ. ತೌಹೀದ್ ಎಂದರೇನು ಎಂಬುದರ ವಾಸ್ತವಿಕ ಅರ್ಥ ಮನವರಿಕೆ ಮಾಡಿದವರು ಬಹಳ ಕಡಿಮೆ ಜನರಿದ್ದಾರೆ. ಅವರೊಂದಿಗೆ ವಿಚಾರಿಸಿದರೆ ತಕ್ಷಣ ಹೇಳುತ್ತಾರೆ– ನಾವು ಮುಸ್ಲಿಮರಲ್ಲವೇ ನಾವು ಕಲಿಮ ಉಚ್ಚರಿಸುವುದಿಲ್ಲವೇ ಎಂದು ಕೇಳುತ್ತಾರೆ. ಆದರೆ ಖೇದಕರವಾದುದು ಏನೆಂದರೆ ಕಲಿಮ ಬಾಯಿಯಲ್ಲಿ ಉಚ್ಚರಿಸಿದರೆ ಸಾಕು ಎಂದು ಅವರು ಭಾವಿಸಿದ್ದಾರೆ.

ನಾನು ದೃಢವಾಗಿ ಹೇಳುತ್ತೇನೆ, ಕಲಿಮ ತಯ್ಯಿಬದ ವಾಸ್ತವಿಕತೆಯನ್ನು ಮನವರಿಕೆ ಮಾಡಿ ಅದನ್ನು ಅನುಷ್ಠಾನಕ್ಕೆ ತರುವುದಾದರೆ ಬಹಳ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ಅಂತಹ ವ್ಯಕ್ತಿ ಅಲ್ಲಾಹನ ಅದ್ಭುತ ಕೃತ್ಯಗಳನ್ನು ದರ್ಶಿಸಲು ಸಾಧ್ಯವಾಗುವುದು. ನನ್ನ ಜಮಾಅತಿಗೆ ಸೇರಿದ ಅನೇಕ ಜನರು ತಾವು ಏಕದೇವ ವಿಶ್ವಾಸಿಗಳೆಂದು ಹೇಳುತ್ತಾರೆ. ಆದರೆ ನಾನು ಖೇದಕರವಾಗಿ ಹೇಳಲು ಬಯಸುವುದೇನೆಂದರೆ ಅವರು ವಿಶ್ವಾಸಿಗಳಾಗಿಲ್ಲ. ತನ್ನ ಸಹೋದರನ ಹಕ್ಕನ್ನು ಅಪಹರಿಸುವವನು, ವಿಶ್ವಾಸ ವಂಚನೆ ಮಾಡುವವನು, ಇತರ ಕೆಟ್ಟ ಕೆಲಸಗಳಿಂದ ದೂರ ಸರಿಯದವನು ತೌಹೀದಿನಲ್ಲಿ ವಿಶ್ವಾಸ ಹೊಂದಿದವನೆಂದು ನಾನು ನಂಬುವುದಿಲ್ಲ. ತನ್ನ ಸಹೋದರನ ಹಕ್ಕನ್ನು ಅಪಹರಿಸುವವನು ಅವನಿಗೆ ವಿಶ್ವಾಸ ವಂಚನೆ ಮಾಡುವವನು ಲಾ ಇಲಾಹ ಇಲ್ಲಲ್ಲಾಹ್ ಎಂದು ನಂಬುವವನಲ್ಲ. ಏಕೆಂದರೆ ಏಕದೇವ ವಿಶ್ವಾಸ ಎಂಬುದು ಎಂತಹ ಅನುಗ್ರಹವೆಂದರೆ ಅದನ್ನು ಗಳಿಸಿದ ಕೂಡಲೆ ಅವನಲ್ಲಿ ಅಸಾಧಾರಣ ಬದಲಾವಣೆ ತಲೆದೋರುತ್ತದೆ. ಅವನಲ್ಲಿ ಅಸೂಯೆ, ದ್ವೇಷ, ತೋರಿಕೆಯ ಗುಣ ಮೊದಲಾದ ವಿಗ್ರಹಗಳು ಇರಲಾರವು. ಅವನು ಅಲ್ಲಾಹನ ಸಾಮೀಪ್ಯ ಗಳಿಸುತ್ತಾನೆ. ಒಬ್ಬನಿಂದ ದುರಹಂಕಾರ, ಸ್ವಂತ ಇಷ್ಟ ಪ್ರಕಾರದ ವರ್ತನೆ, ತೋರಿಕೆ, ಅಸೂಯೆ, ಹಗೆತನ, ಜಿಪುಣತೆ, ಕಾಪಟ್ಯ, ಪ್ರತಿಜ್ಞೆ ಉಲ್ಲಂಘನೆ, ಮೊದಲಾದ ವಿಗ್ರಹಗಳು ದೂರ ಸರಿದಾಗ ಮಾತ್ರ ಅವನು ವಾಸ್ತವಿಕ ಏಕದೇವ ವಿಶ್ವಾಸಿ ಆಗುತ್ತಾನೆ. ಆದುದರಿಂದ ಕೇವಲ ಬಾಯಿಮಾತಿನಿಂದ ನಾನು ಅಲ್ಲಾಹನನ್ನು ಏಕನೂ ಸಹಭಾಗಿ ಇಲ್ಲದವನೂ ಆಗಿದ್ದಾನೆಂದು ಹೇಳಿದರೆ ಯಾವ ಪ್ರಯೋಜನವೂ ಸಿಗಲಾರದು. ಕೇವಲ ಬಾಯಿಂದ ಏಕದೇವ ವಿಶ್ವಾಸವನ್ನು ಉಚ್ಚರಿಸುವವನು ಯಾವುದಾದರು ವಿಷಯ ಅವನ ಮನೋಭಾವಕ್ಕೆ ವಿರುದ್ಧವಾದರೆ ಅವನು ಕೋಪವನ್ನೂ ಕ್ರೋಧವನ್ನೂ ತನ್ನ ದೇವರನ್ನಾಗಿ ಮಾಡಿಕೊಳ್ಳುತ್ತಾನೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಮನುಷ್ಯನೊಳಗಿಂದ ಸ್ವಾರ್ಥ ಹಿತಾಸಕ್ತಿಯ ಕ್ರಿಮಿ ಅಲ್ಲಾಹನ ಅನುಗ್ರಹದಿಂದಲ್ಲದೆ ಹೊರಗೆ ಬರಲಾರದು. ಯಥಾರ್ಥ ಏಕದೇವ ವಿಶ್ವಾಸದಲ್ಲಿ ನೆಲೆನಿಲ್ಲದಿದ್ದರೆ ಅಲ್ಲಾಹನ ಅನುಗ್ರಹ ದೊರಕಲಾರದು. ಕೇವಲ ಬಾಯಿಯಿಂದ ಲಾ ಇಲಾಹ ಇಲ್ಲಲ್ಲಾಹ್ ಎಂದು ಉಚ್ಚರಿಸಿದರೆ ಒಬ್ಬನು ಏಕದೇವ ವಿಶ್ವಾಸಿ ಆಗಲಾರನು. ಏಕದೇವ ವಿಶ್ವಾಸಿ ಆಗಲು ಅಲ್ಲಾಹನನ್ನು ಎಲ್ಲಾ ಶಕ್ತಿಗಳ ಮಾಲಿಕನೆಂದು ನಂಬುವುದು ಆವಶ್ಯಕವಾಗಿದೆ. ಅವನನ್ನು ವಾಸ್ತವಿಕ ಆರಾಧ್ಯ ಎಂದು ನಂಬುವುದು ಆವಶ್ಯಕವಾಗಿದೆ. ಅಲ್ಲಾಹನನ್ನು ಎಲ್ಲ ಶಕ್ತಿಗಳ ಮಾಲಿಕನೆಂದೂ ವಾಸ್ತವಿಕವಾಗಿ ಆರಾಧನೆಗೆ ಅವನು ಮಾತ್ರ ಅರ್ಹನೆಂದೂ ನಂಬುವುದಾದರೆ ಲೌಕಿಕ ಉಪಾಯಗಳಿಂದ ಅಥವಾ ವಿವಿಧ ರೀತಿಯ ಲೌಕಿಕ ಸೇವನಗಳಿಂದ ಒಬ್ಬ ಮನುಷ್ಯ ಅನ್ಯ ಮನುಷ್ಯರ ಹಕ್ಕುಗಳನ್ನು ಅಪಹರಿಸಲಾರನು. ಆದುದರಿಂದ ತನ್ನ ಸಹೋದರರ ಹಕ್ಕುಗಳನ್ನು ಈಡೇರಿಸಿ ಕೊಡದವನು, ರಾಜಿಯ ಕಡೆಗೆ ಹೆಜ್ಜೆ ಹಾಕದವನು, ಹಗೆತನವನ್ನು ಕೊನೆಗೊಳಿಸದವನು, ಏಕದೇವ ವಿಶ್ವಾಸಿಯಾಗಿರಲು ಸಾಧ್ಯವಿಲ್ಲ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಸಂಕ್ಷಿಪ್ತ ರೂಪವಾಗಿದೆ. ಇದು ಎಂತಹ ಸೂಕ್ಷ್ಮ ವಿಚಾರವೆಂದರೆ ನಾವು ಅದನ್ನು ಮನವರಿಕೆ ಮಾಡುವುದಾದರೆ ನಾವೆಲ್ಲರೂ ಯಾವಾಗಲೂ ಸೌಹಾರ್ದಕ್ಕೆ ಅಸ್ತಿಭಾರ ಹಾಕುವವರೂ ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡುವವರೂ ಆಗುವೆವು. ನಮ್ಮವರಲ್ಲಿ ಪ್ರತಿಯೊಬ್ಬನು ಈ ವಿಷಯವನ್ನು ಮನವರಿಕೆ ಮಾಡಿಕೊಂಡು ತನ್ನನ್ನು ಪರಿಶೋಧಿಸಬೇಕಾಗಿದೆ. ಹಾಗೆ ಮಾಡದಿದ್ದರೆ ಅದು ಚಿಂತಾರ್ಹವಾಗಿದೆ. ಬಾಯಿಯಲ್ಲಿ ಏಕದೇವ ವಿಶ್ವಾಸವನ್ನು ಉಚ್ಚರಿಸಿ ಕರ್ಮದಲ್ಲಿ ಅದನ್ನು ನಿರಾಕರಿಸುವವರಾಗುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸೌಹಾರ್ದ ಸ್ಥಾಪನೆ ಉನ್ನತ ಮಟ್ಟದ ಒಂದು ಸದ್ಗುಣವಾಗಿದೆ. ಅದು ಮಾನವೀಯತೆಗೆ ಆವಶ್ಯಕವಾಗಿದೆ.

ಮಹೋನ್ನತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: **ವ ಅಸ್‌ಲಿಹೂ ಝಾತ ಬೈನಿಕುಮ್.** ನಿಮ್ಮ ಮಧ್ಯೆ ಸೌಹಾರ್ದ ಸ್ಥಾಪಿಸಿರಿ. **ವಸ್ಸುಲ್‌ಹು ಖೈರುನ್.** ರಾಜಿ ಮಾಡಿಕೊಳ್ಳುವುದು ಅತ್ಯುತ್ತಮವಾದುದು. **ವಇನ್ ಜನಹೂ ಲಿಸ್ಸಿಲ್‌ಮಿ ಫಜ್‌ನಹ್ ಲಹಾ.** ಅವರು ಶಾಂತಿಯೆಡೆಗೆ ವಾಲಿದರೆ ನೀವು ಸಹ ಅದಕ್ಕೆ ಒಪ್ಪಿರಿ. **ವ ಇಬಾದುರ್ರಹ್ಮಾನಿಲ್ಲಝೀನ ಯಮ್‌ಶೂನ ಅಲಲ್ ಅರ್‌ಝಿ ಹೌನಾ.** ಪರಮದಯಾವಂತನ(ಅಲ್ಲಾಹನ) ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. **ವಇಝಾ ಮರ್ರೂ ಬಿಲ್ಲಗ್‌ವಿ ಮರ್ರೂ ಕಿರಾಮ.** ನಿಷ್ಪ್ರಯೋಜಕ ವಿಷಯಗಳ ಕಡೆಗೆ ಅವರು ಗಮನ ಕೊಡದೆ ಗಾಂಭೀರ್ಯದಿಂದ ವರ್ತಿಸುವವರಾಗಿದ್ದಾರೆ. **ಇದ್‌ಫಅ್ ಬಿಲ್ಲತೀ ಹಿಯ ಅಹ್‌ಸನು ಫಇಝಲ್ಲಝೀ ಬೈನಕ ವಬೈನಹೂ ಅದಾವತುನ್ ಕಅನ್ನಹೂ ವಲಿಯ್ಯುನ್ ಹಮೀಮ್**. ಅತಿ ಉತ್ತಮವಾದ ಒಳಿತಿನ ಮೂಲಕ ನೀನು ಕೆಡುಕನ್ನು ತಡೆ. ಆಗ ನಿನ್ನ ಮತ್ತು ಅವನ ಮಧ್ಯೆ ಇರುವ ವಿರೋಧ ನೀಗಿ ಅವನು ಆಪ್ತ ಮಿತ್ರನಾಗುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಜಮಾಅತನ್ನು ಸ್ಥಾಪಿಸುವ ಉದ್ದೇಶವೇನೆಂದರೆ ನಾಲಗೆ, ಕಿವಿ, ಕಣ್ಣು ಮತ್ತು ಪ್ರತಿಯೊಂದು ಅಂಗದಲ್ಲಿ ತಖ್ವ ತುಂಬಿರಬೇಕೆಂದೂ ತಖ್ವದ ಪ್ರಕಾಶ ಒಳಗೆಯೂ ಹೊರಗೆಯೂ ಇರಬೇಕೆಂದೂ ಆಗಿದೆ. ಅತ್ಯುತ್ತಮ ಸದ್ಗುಣಗಳನ್ನು ಪ್ರಕಟಿಸುವವನಾಗಬೇಕು. ಅನಾವಶ್ಯಕವಾಗಿ ಸಿಟ್ಟಾಗಲೇಬಾರದು. ನಮ್ಮ ಜಮಾಅತಿನ ಅನೇಕರಲ್ಲಿ ಸಿಟ್ಟು ಮಾಡುವ ನ್ಯೂನತೆ ಈಗ ಸಹ ಇದೆ. ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ದ್ವೇಷ, ಅಸೂಯೆ ತಲೆದೋರುತ್ತದೆ. ಅವರು ಜಗಳ ಮಾಡುತ್ತಾರೆ. ಇಂತಹ

ಜನರು ಜಮಾಅತಿಗೆ ಸೇರಿದವರಲ್ಲ. ಒಬ್ಬನು ಬೈದರೆ ಇನ್ನೊಬ್ಬನು ಮೌನವಾಗಿರುವುದರಲ್ಲಿ ಕಷ್ಟವೇನಿದೆ ಎಂದು ನನಗೆ ತಿಳಿಯುವುದಿಲ್ಲ. ಪ್ರತಿಯೊಂದು ಜಮಾಅತಿನ ಸುಧಾರಣೆ ಮೊತ್ತ ಮೊದಲು ಸ್ವಭಾವ ಸುಧಾರಣೆಯಿಂದ ಪ್ರಾರಂಭವಾಗುತ್ತದೆ. ಆರಂಭದಲ್ಲಿ ಸಹನೆಯಿಂದ ತರಬೇತಿ ಮಾಡಬೇಕು. ಅದಕ್ಕಿರುವ ಉಪಾಯವೇನೆಂದರೆ ಯಾರಾದರೂ ಬೈದರೆ ಅವನಿಗೋಸ್ಕರ ಹೃತ್ಪೂರ್ವಕವಾಗಿ ಪ್ರಾರ್ಥಿಸಬೇಕು. ಅಲ್ಲಾಹನು ಅವನನ್ನು ಸುಧಾರಣೆ ಮಾಡುವವನಾಗಲಿ ಮತ್ತು ಅವನ ಹಗೆತನವನ್ನು ವರ್ಧಿಸದಂತೆ ಮಾಡಲಿ ಎಂದು. ಸಹನೆ, ಕ್ಷಮೆ ಮೊದಲಾದ ಸದ್ಗುಣಗಳ ಸ್ಥಾನದಲ್ಲಿ ಮೃಗೀಯತೆ ಸ್ಥಾಪಿತವಾಗಲು ಅಲ್ಲಾಹನು ಖಂಡಿತ ಇಷ್ಟಪಡುವುದಿಲ್ಲ. ನೀವು ಸದ್ಗುಣಗಳಲ್ಲಿ ಅಭಿವೃದ್ಧಿ ಹೊಂದಿದರೆ ಬಹಳ ಬೇಗನೆ ಅಲ್ಲಾಹನ ಸಾಮೀಪ್ಯ ಪಡೆಯುವಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ನೀವು ನನ್ನೊಂದಿಗೆ ಸಂಬಂಧ ಸ್ಥಾಪಿಸಿದ್ದರೆ ಮತ್ತು ನೀವು ನನ್ನ ಸೈನ್ಯದಲ್ಲಿ ಸೇರಿರುವುದಾಗಿ ವಾದಿಸುವುದಾದರೆ ನೀವು ಉನ್ನತ ಮಟ್ಟದ ಸದ್ಗುಣಗಳನ್ನು ಅವಲಂಬಿಸಬೇಕು. ನೀವು ಗಲಬೆಗೊಂದಲಗಳಿಂದ ದೂರ ಸರಿಯಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನೊಂದಿಗೆ ಸಂಬಂಧ ಸ್ಥಾಪಿಸಿದವರೊಂದಿಗೆ ಹೇಳಿದರು: ನೀವು ನಿಮ್ಮ ಹೃದಯಗಳನ್ನು ಶುದ್ಧೀಕರಿಸಿರಿ. ನಿಮ್ಮ ಕಾರುಣ್ಯ ಗುಣವನ್ನು ವರ್ಧಿಸಿರಿ. ಕಷ್ಟಪಡುವವರೊಂದಿಗೆ ಸಹಾನುಭೂತಿ ಹೊಂದಿರಿ. ಭೂಮಿಯಲ್ಲಿ ಶಾಂತಿಯನ್ನು ಹರಡಿರಿ. ಆ ಮೂಲಕ ಧರ್ಮ ಹಬ್ಬುವುದು. ಆದುದರಿಂದ ಎದ್ದೇಳಿರಿ, ತೌಬ ಮಾಡಿರಿ, ಒಳ್ಳೆಯ ಕೆಲಸಮಾಡಿ ನಿಮ್ಮ ಮಾಲಿಕನಾದ ಅಲ್ಲಾಹನ ಸಂಪ್ರೀತಿ ಗಳಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉಪದೇಶಿಸುತ್ತಾರೆ: ನೀವು ಕೆಡುಕಿನಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಮಾನವರೊಂದಿಗೆ ಸಹಾನುಭೂತಿ ಪ್ರಕಟಿಸಿರಿ. ನಿಮ್ಮ ಹೃದಯಗಳನ್ನು ದ್ವೇಷ ಅಸೂಯೆಗಳಿಂದ ಮುಕ್ತಗೊಳಿಸಿ ಶುದ್ಧೀಕರಿಸಿರಿ. ಹಾಗೆ ಮಾಡಿದರೆ ನೀವು ದೇವದೂತರ ಹಾಗೆ ಆಗುತ್ತೀರಿ. ಮಾನವರ ಬಗ್ಗೆ ಸಹಾನುಭೂತಿ ಹೊಂದದ ಧರ್ಮ ಎಷ್ಟು ಕೊಳಕಾಗಿದೆ. ಸ್ವಾರ್ಥ ದ್ವೇಷಗಳ ಮುಳ್ಳುಗಳಿಂದ ತುಂಬಿದ ಮಾರ್ಗ ಎಷ್ಟು ಕೆಟ್ಟದ್ದಾಗಿದೆ. ನನ್ನೊಂದಿಗೆ ಇರುವ ನೀವು ಹಾಗೆ ಆಗಬೇಡಿರಿ. ಯೋಚಿಸಿರಿ, ಧರ್ಮದಿಂದ ಸಿಗುವುದೇನು? ಸದಾ ಸಮಯ ಸ್ವತಂತ್ರರಾಗಿ ಜೀವಿಸುವುದು ನಿಮ್ಮ ಗುಣವಾಗಬೇಕೆಂದೋ? ಖಂಡಿತ ಅಲ್ಲ. ಧರ್ಮ ಎಂದರೆ ಅಲ್ಲಾಹನಲ್ಲಿರುವ ಜೀವಿತವನ್ನು ಗಳಿಸುವುದಾಗಿದೆ. ಅಲ್ಲಾಹನ ಗುಣ ವಿಶೇಷಗಳು ಮನುಷ್ಯನೊಳಗೆ ಪ್ರವೇಶಿಸುವ ತನಕ ಆ ಜೀವಿತ ಲಭಿಸಲಾರದು. ನೀವು ಅಲ್ಲಾಹನಿಗೋಸ್ಕರ ಎಲ್ಲರ ಮೇಲೆ ದಯೆದೋರಿರಿ. ಹಾಗೆ ಮಾಡಿದರೆ ಆಕಾಶದಲ್ಲಿ ನಿಮ್ಮ ಮೇಲೆ ದಯೆತೋರಿಸಲ್ಪಡುವುದು. ನಿಮ್ಮ ಪ್ರಕಾಶ ಎಲ್ಲ ಪ್ರಕಾಶಗಳ ಮೇಲೆ ಜಯಶಾಲಿಯಾಗುವ ಒಂದು ಉಪಾಯ ನಾನು ನಿಮಗೆ ಕಲಿಸುವೆನು. ಅದೆಂದರೆ, ನೀವು ಎಲ್ಲಾ ತರದ ದ್ವೇಷಾಸೂಯೆಗಳನ್ನು ತ್ಯಜಿಸಿರಿ. ಮಾನವರ ಬಗ್ಗೆ ಅನುಕಂಪವುಳ್ಳವರಾಗಿರಿ. ನೀವು ಅಲ್ಲಾಹನಲ್ಲಿ ತಲ್ಲೀನರಾಗಿರಿ. ಅಲ್ಲಾಹನ ಉನ್ನತ ಪರಿಶುದ್ಧತೆ ಗಳಿಸಿರಿ. ಕರಾಮತ್ ಪ್ರಕಟಿಸುವ ಮಾರ್ಗ ಇದೇ ಆಗಿದೆ. ಆಗ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ. ದೇವದೂತರು ನಿಮ್ಮ ಸಹಾಯಕ್ಕಾಗಿ ಇಳಿದು ಬರುತ್ತಾರೆ.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಅನುಷ್ಠಾನಕ್ಕೆ ತಂದು ಮಾನವರಿಗೆ ಸಹಾನುಭೂತಿ ತೋರಿಸುವವರಾಗುವಂತೆ ಅಲ್ಲಾಹನು ಮಾಡಲಿ. ನಾವು ಶಾಂತಿ ಸಮಾಧಾನದ ಅಸ್ತಿಭಾರ ಹಾಕುವವರನ್ನಾಗಿ ಅಲ್ಲಾಹನು ಮಾಡಲಿ. ನಾವು ಏಕದೇವ ವಿಶ್ವಾಸದ ಸರಿಯಾದ ಜ್ಞಾನ ಗಳಿಸುವವರನ್ನಾಗಿ ಅಲ್ಲಾಹನು ಮಾಡಲಿ. ಸಮಾಜದಲ್ಲಿ ಪ್ರೀತಿಯನ್ನು ಹರಡುವವರನ್ನಾಗಿಯೂ ಲೌಕಿಕ ಆಶಾಭಿಲಾಷೆಗಳು ನಮ್ಮ ಮೇಲೆ ಆವರಿಸದಂತೆಯೂ ಮಾಡಲಿ. ನಾವು ಯಾವಾಗಲೂ ಅಲ್ಲಾಹನ ಸಂಪ್ರೀತಿಯನ್ನು ಅನ್ವೇಷಿಸುವವರನ್ನಾಗಿ ಮಾಡಲಿ. ಇವುಗಳೇ ನಮ್ಮ ಪ್ರಥಮ ಆದ್ಯತೆಗಳಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis***$^{(atba)}$

*At, Masjid Baithul Futhuh, London. on 18-08-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon